# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ : 752 (795)
2. ಸದಸ್ಯರ ಹೆಸರು : ಶ್ರೀ ಟಿ.ಎನ್. ಜವರಾಯಿ ಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು)
3. ಉತ್ತರಿಸಬೇಕಾದ ದಿನಾಂಕ : 19.08.2025
4. ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು.

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜಧಾನಿ ಬೆಂಗಳೂರಿಗೆ 2ನೇ ಅಂತರಾಷ್ಟ್ರೀಯ ವಿಮಾನನಿಲ್ದಾಣ ನಿರ್ಮಾಣ ಸಂಬಂಧ ಅಂತಿಮವಾಗಿ ಯಾವ ಸ್ಥಳವನ್ನು ಗುರುತಿಸಲಾಗಿದೆ; (ವಿವರ ನೀಡುವುದು) | ಬೆಂಗಳೂರು 2ನೇ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಾಣದ ಸಂಬಂಧ ಇಲ್ಲಿಯವರೆಗೂ ಅಂತಿಮ ಸ್ಥಳವನ್ನು ಆಯ್ಕೆ ಮಾಡಿರುವುದಿಲ್ಲ. |
| (ಆ) | ಈ ವಿಮಾನ ನಿಲ್ದಾಣವನ್ನು ನಿರ್ಮಾಣ ಮಾಡುವ ಸಲುವಾಗಿ ಆಯ್ಕೆ ಮಾಡಿರುವ ಸ್ಥಳವನ್ನು ಭಾರತೀಯ ವಿಮಾನಯಾನ ಪ್ರಾಧಿಕಾರದವರು ಸ್ಥಳ ಪರಿಶೀಲನೆ ಮಾಡಿದ್ದಾರೆಯೇ; (ವಿವರ ನೀಡುವುದು) | ರಾಜ್ಯ ಸರ್ಕಾರವು ಆಯ್ಕೆ ಮಾಡಿದ್ದ 3 ಸ್ಥಳಗಳನ್ನು AAI ಸಂಸ್ಥೆಯ ತಾಂತ್ರಿಕ ತಂಡವು ದಿನಾಂಕ:07.04.2025 ರಂದು ಪರಿವೀಕ್ಷಣೆಯನ್ನು ಕೈಗೊಂಡಿದ್ದು, ಪೂರ್ವ ಕಾರ್ಯಸಾಧ್ಯತಾ ವರದಿಯನ್ನು ಸದರಿ ಸಂಸ್ಥೆಯು ಸಲ್ಲಿಸಬೇಕಾಗಿರುತ್ತದೆ. |
| (ಇ) | ಸರ್ಕಾರ 3-4 ಸ್ಥಳಗಳನ್ನು ಆಯ್ಕೆ ಮಾಡಿಕೊಂಡಿರುವುದರಿಂದ ಆ ಭಾಗದ ರೈತರು ಗೊಂದಲದಲ್ಲಿ ಇದ್ದು, ಅವರ ಜಮೀನುಗಳಲ್ಲಿ ವ್ಯವಸಾಯ ಮಾಡದೆ ಜಮೀನುಗಳಲ್ಲಿ ಅಭಿವೃದ್ಧಿ ಕಾರ್ಯ ಚಟುವಟಿಕೆಗಳನ್ನು ಮಾಡದೆ ಇರುವುದರಿಂದ ರೈತರಿಗೆ ತೊಂದರೆಯಾಗುವುದಿಲ್ಲವೆ? (ಅಂತಿಮ ಸ್ಥಳದ ಬಗ್ಗೆ ಸ್ಪಷ್ಟತೆ ನೀಡುವುದು) | 2ನೇ ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ 3 ಸ್ಥಳಗಳನ್ನು ಆಯ್ಕೆ ಮಾಡಿಕೊಂಡಿದ್ದು, ಸದರಿ ಸ್ಥಳದ ಪೂರ್ವ ಕಾರ್ಯಸಾಧ್ಯತಾ ವರದಿಯನ್ನು AAI ಸಂಸ್ಥೆಯು ಸಿದ್ಧಪಡಿಸುತ್ತಿದ್ದು, ಈ 3 ಸ್ಥಳಗಳಲ್ಲಿ ಅಂತಿಮ ಸ್ಥಳವನ್ನು ನಿಗದಿಪಡಿಸಿರುವುದಿಲ್ಲ. ಸರ್ಕಾರವು ಭೂಸ್ವಾಧೀನ ಪ್ರಕ್ರಿಯೆಯನ್ನು ಇಲ್ಲಿಯವರೆಗೂ ಪ್ರಾರಂಭಿಸಿರುವುದಿಲ್ಲದೇ ಇರುವುದರಿಂದ ರೈತರಿಗೆ ಯಾವುದೇ ತೊಂದರೆಯಾಗುವುದಿಲ್ಲ. |

ಸಂಖ್ಯೆ:ಮೂಅಇ 174 ರಾಅವಿ 2025

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ, ಸಚಿವರು